



ಅಪೂರ್ವ ಸಂಗಮ: 1967ರ ಅ. 10ರಂದು ಬೆಂಗಳೂರಿನಲ್ಲಿ ನಡೆದ ತಮ್ಮ ಹುಟ್ಟುಹಬ್ಬದ ಸಮಾರಂಭದಲ್ಲಿ ವಿ.ಕೃ. ಗೋಕಾಕ್ ಹಾಗೂ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರೊಂದಿಗೆ ಶಿವರಾಮ ಕಾರಂತರು. ಫೋಟೊ: ಟಿ.ಎಲ್. ರಾಮಸ್ವಾಮಿ/ಪ್ರಜಾವಾಣಿ ಆರ್ಕೈವ್ಸ್

ಬರೆಯಿರಿ ಕಾಲಂ ಇರಬಹುದು. ಈ ಎರಡು ಹೆಸರುಗಳು ನಿಮಗೆ ಗೊತ್ತಿದ್ದರೆ ಒಂದು ಮಾರ್ಕ್ಸ್ ಗ್ಯಾರಂಟಿ ಎಂದರು. ಅವರ ಮಾತು ನನ್ನ ತಲೆಯಲ್ಲಿ ಉಳಿಯಿತು. ಇದನ್ನು ಗಟ್ಟುಮಾಡಿ ನೆನಪಿಟ್ಟುಕೊಂಡೆ. ಮೇಷ್ಟ್ರ ಮಾತು ಸುಳ್ಳಾಗಲಿಲ್ಲ. ಮುಂದೆ ಹಲವು ಬಾರಿ ನನಗೆ ಇದರಿಂದ ಒಂದು ಅಂಕ ಸುಲಭವಾಗಿ ಲಭಿಸಿದೆ!

ನಮ್ಮಣ್ಣ ಆಗ ಎಂ.ಎ. ಓದುತ್ತಿದ್ದ. ಒಮ್ಮೆ ಅವನು ಲೈಬ್ರರಿಯಿಂದ 'ಮೂಕಜ್ಜಿಯ ಕನಸುಗಳು' ಕೃತಿ ತಂದು ಓದುತ್ತಿದ್ದ. ನನಗೂ ಓದುವ ಕುತೂಹಲವಾಯಿತು. ಓದಲು ಪ್ರಾರಂಭಿಸಿದೆ. ಆದರೆ ಪುರುಷೋತ್ತಮನ ಸಾಹಸಗಳಂತೆ ಇದು ಅಷ್ಟು ಸುಲಭವಾಗಿ ಅರ್ಥವಾಗಲಿಲ್ಲ.

ಅದಾಗ ತಾನೇ ಕೌಮಾರ್ಯ ಕಳೆದು ಯೌವನಕ್ಕೆ ಕಾಲಿಟ್ಟಿದ್ದೆ. ಜಗತ್ತು, ಸೃಷ್ಟಿ, ಸಾವು, ದೇವರು, ದೆವ್ವ, ಆಚಾರ, ವಿಚಾರ, ಪ್ರೀತಿ, ಕಾಮ, ಸಂಬಂಧ ಹೀಗೆ ಹತ್ತು ಹಲವು ಪ್ರಶ್ನೆಗಳು ಮನಸ್ಸಿನಲ್ಲಿ ಹುಟ್ಟುತ್ತಿದ್ದವು. ಅವನ್ನು ಪರಿಹರಿಸುವವರು ಇರಲಿಲ್ಲ. ಮನಸ್ಸು ಗೊಂದಲದ ಗೂಡಾಗಿತ್ತು. ಆಗ ಓದಿದ 'ಮೂಕಜ್ಜಿಯ ಕನಸುಗಳು' ಕೃತಿಯನ್ನು ಸಂಪೂರ್ಣವಾಗಿ ಜೀರ್ಣಿಸಿಕೊಳ್ಳಲಾಗದಿದ್ದರೂ ನನ್ನ ಕೆಲವು ಪ್ರಶ್ನೆಗಳಿಗೆ ಅಲ್ಲಿ ಉತ್ತರ ಸಿಕ್ಕಿದ್ದಂತೂ ದಿಟ. ಹಾಗಾಗಿ ನನ್ನಲ್ಲಿ ಹುಟ್ಟಿದ ವೈಚಾರಿಕ ಯೋಚನೆಗಳಿಗೆ ತಳಹದಿ ಹಾಕಿಕೊಟ್ಟವರು ಕಾರಂತರು.

ಅದೇ ಕಾದಂಬರಿಯಲ್ಲಿ ಸಲಿಂಗಕಾಮದ ಬಗ್ಗೆ ಒಂದು ಪ್ರಸಂಗ ಬರುತ್ತದೆ. ನನಗೆ ಆ ಸನ್ನಿವೇಶದ ತಲೆಬುಡ ಗೊತ್ತಾಗಿರಲಿಲ್ಲ. ಅಜ್ಜಿ ಅನಂತರಾಯನನ್ನು ಯಾಕೆ ಬೈಯುತ್ತಾಳೆ. ಅವನೇಕೆ ಪೆಚ್ಚಾಗುತ್ತಾನೆ ಎಂಬುದು ಅರ್ಥವಾಗಿರಲಿಲ್ಲ. ಯಾರಲ್ಲಿ ಕೇಳುವುದು? ಅದೇನು ಭಂಡ ಧೈರ್ಯ ಬಂತೋ... ಮನೆಯ ಪಕ್ಕದಲ್ಲೇ ಪೋಸ್ಟ್ ಆಫೀಸ್ ಇತ್ತು. ಪೋಸ್ಟ್‌ಕಾರ್ಡ್‌ನಲ್ಲಿ ಪ್ರಶ್ನೆ ಬರೆದು ಕಾರಂತರಿಗೆ ಪೋಸ್ಟ್ ಮಾಡಿಯೇಬಿಟ್ಟೆ. ಆಶ್ಚರ್ಯ ಎಂದರೆ ಕೆಲವೇ ದಿನಗಳಲ್ಲಿ ಅವರಿಂದ ನನಗೆ ಉತ್ತರ ಬರಬೇಕೆ? ನನ್ನ ಆನಂದಕ್ಕೆ ಪಾರವೇ ಇರಲಿಲ್ಲ. ಆ ಪತ್ರವನ್ನು ಪ್ರಶಸ್ತಿಯಂತೆ ಕಾಪಿಟ್ಟುಕೊಂಡು ಎಲ್ಲರಿಗೂ ತೋರಿಸಿಕೊಂಡು ಬಂದು ನನ್ನ ಗೌರವ ಹೆಚ್ಚಿಸಿಕೊಂಡಿದ್ದೆ. ಇದೇ ಅಭಿಮಾನದಿಂದ ಕಾರಂತರ ಇತರ ಕೃತಿಗಳನ್ನೂ ಓದಿದೆ. ಅವರು ತಮ್ಮ ಕೃತಿಗಳ ಮೂಲಕ ಮಾರ್ಗದರ್ಶಕರಂತೆ ಕಂಡರು. ಅವರನ್ನು ಮುಖತಃ ಕಾಣುವ ಬಯಕೆಯಾಯಿತು. ಹೇಗೆ?

ಮೈಸೂರಿನಲ್ಲಿ 'ವಿಶ್ವಕನ್ನಡ ಸಮ್ಮೇಳನ' ಆಯೋಜನೆಗೊಂಡಿತ್ತು. ಆ ಸಮಾರಂಭಕ್ಕೆ ಕಾರಂತರು ಬರುತ್ತಾರೆ ಎಂದು ಪತ್ರಿಕೆಗಳಲ್ಲಿ ಓದಿದ್ದೆ. ಅವರು ನನಗೆ ಬರೆದಿದ್ದ ಪತ್ರವನ್ನು ಜೇಬಿನಲ್ಲಿಟ್ಟುಕೊಂಡು ಅವರನ್ನು ಮಾತನಾಡಿಸಬೇಕೆಂದು ಜುಬ್ಬ ಹಾಕಿಕೊಂಡು ಮೈಸೂರಿಗೆ ಹೋದೆ. ದೂರದಿಂದ ವೇದಿಕೆಯ ಮೇಲೆ ಕಾರಂತರೇನೊ ಕಂಡರು. ಧ್ವನಿವರ್ಧಕದಲ್ಲಿ ಅವರ ಮಾತೂ ಕೇಳಿಸಿತು. ಆದರೆ ನಾನು ಅವರ ಸಮೀಪ ಕೂಡ ಹೋಗಲಾಗಲಿಲ್ಲ. ಆ ಜನಜಂಗುಳಿಯಲ್ಲಿ ನಾನು ಕಳೆದುಹೋಗದಿದ್ದುದು ಒಂದು ಪುಣ್ಯ!

ಆಮೇಲೆ ಪತ್ರಕರ್ತನಾಗಿ ವೃತ್ತಿ ಆರಂಭಿಸಿ ಅಲ್ಲಿ ಒಂದಷ್ಟು ಕಾಲ ಮಣ್ಣುಹೊತ್ತು ನಂತರ ಸಿನಿಮಾಕ್ಷೇತ್ರಕ್ಕೆ ಬಂದೆ. ಆಗ ನಾಗಾಭರಣರು ಶಿವರಾಮ ಕಾರಂತರ 'ಚಿಗುರಿದ ಕನಸು' ಕೃತಿಯನ್ನು ಸಿನಿಮಾ ಮಾಡಲು ಯೋಜಿಸಿದ್ದರು. ಅದರ ಚಿತ್ರಕಥೆಯ ರಚನೆಯಲ್ಲಿ ನಾನು ಕೂಡ ಪಾಲ್ಗೊಂಡಿದ್ದೆ. ಕಾರಂತರು ಬೆಂಗಳೂರಿಗೆ ಬಂದಿದ್ದಾರೆ ಎಂಬ ಸುದ್ದಿ ಬಂತು. ಅವರು ಬೆಂಗಳೂರಿನ 'ಶಿವಾನಂದ ಸ್ಟೋರ್ಸ್' ಬಳಿಯ 'ಜನಾರ್ದನ ಹೋಟೆಲ್'ನಲ್ಲಿ ಉಳಿದುಕೊಂಡಿದ್ದರು. ಚಿತ್ರಕಥೆಯನ್ನು ಅವರಿಗೆ ತೋರಿಸಿ